2013-14ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಆನ್‌ಲೈನ್ ಪ್ರವೇಶಾತಿಗೆ ಸಂಬಂದಿಸಿದಂತೆ, ಆಯ್ದ 45 ಆನ್‌ಲೈನ್ ಅರ್ಜಿ ಸಲ್ಲಿಕೆ/ ದಾಖಲೆ ಪರಿಶೀಲನೆ ಕೇಂದ್ರ"ಗಳ ಕುರಿತು ಚರ್ಚಿಸಲು ದಿನಾಂಕ: 06-5-2013ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಸಭೆಯ ನಡವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿ/ ಸಿಬ್ಬಂದಿಯವರ ವಿವರ ಲಗತ್ತಿಸಲಾಗಿದೆ.

1. 2012-13ನೇ ಸಾಲಿನ ಆನ್‌ಲೈನ್ ಡಿಪ್ಲೊಮಾ ಪ್ರವೇಶ ಪ್ರಕ್ರಿಯೆಗಳ ಯಶಸ್ಸಿನ ಮತ್ತು ಕುಂದು ಕೊರತೆಗಳ ಬಗ್ಗೆ ಚರ್ಚಿಸಲಾಗಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಬೇಕಾಗಿದ್ದ ಡಿಪ್ಲೊಮಾ ಪ್ರವೇಶ ಪ್ರಕ್ರಿಯೆಯನ್ನು, ಕೊನೆ ಕ್ಷಣದಲ್ಲಿ ನಡೆಸಲು ಸಾಧ್ಯವಿಲ್ಲವೆಂದೂ, ತಾಂತ್ರಿಕ ಶಿಕ್ಷಣ ಇಲಾಖೆಯೆ ಪ್ರವೇಶ ಪ್ರಕ್ರಿಯೆಯನ್ನು ನಡೆಸಬೇಕೆಂದು ಸರ್ಕಾರವು ಸೂಚಿಸಿದ ಮೇರೆಗೆ, ಕಡಿಮೆ ಅವಧಿಯಲ್ಲಿ ಸರ್ಕಾರದ ಯಾವುದೇ ಸಹಾಯಧನವಿಲ್ಲದೆ ಮಾನ್ಯ ನಿರ್ದೇಶಕರು ಸಾಫ್ಟ್‌ವೇರ್ ಸಿದ್ದಪಡಿಸಿ, ಮೂಲಭೂತ ಸೌಲಭ್ಯಗಳನ್ನು ಕ್ರೋಢೀಕರಿಸಿ, ಇವರ ದಿಟ್ಟತನ ಹಾಗೂ ಅವಿರತ ಶ್ರಮದಿಂದ ಪ್ರವೇಶ ಪ್ರಕ್ರಿಯೆಯು ಯಶಸ್ವಿಯಾಗಿ ನಡೆಸಲು ಸಾಧ್ಯವಾಯಿತೆಂದು ಎಂದು ಶ್ರೀ ಡಿ.ವಿ. ಶ್ರೀನಿವಾಸಮೂರ್ತಿಯವರು ಮಾನ್ಯ ನಿರ್ದೇಶಕರಿಗೆ ಅಭಿನಂದನೆಗಳನ್ನು ಸಲ್ಲಿಸಿದರು ಹಾಗೂ ಸಹಕಾರ ನೀಡಿದ ಎಲ್ಲಾ ಪ್ರಾಂಶುಪಾಲರುಗಳಿಗೆ ನಿರ್ದೇಶಕರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

   ಈ ಕುರಿತಂತೆ ನಿರ್ದೇಶಕರು ಮಾತನಾಡಿ, ಕಳೆದ ಸಾಲಿನಲ್ಲಿ ಸಮಯದ ಅಭಾವ ಹಾಗೂ ಪ್ರವೇಶ ಕುರಿತಂತೆ ಪ್ರಕಟಣೆಗಳನ್ನು ಹಾಗೂ ಸೀಟು ಮ್ಯಾಟ್ರಿಕ್ಸ್ ಕೆ.ಇ.ಎ. ವತಿಯಿಂದ ಹೊರಡಿಸಿದ್ದರಿಂದ ಪ್ರವೇಶ ಪ್ರಕ್ರಿಯೆಯಲ್ಲಿ ಕೆಲವು ಲೋಪದೋಷಗಳು ಕಂಡು ಬಂದು, ಪ್ರವೇಶ ಸಮಯದಲ್ಲಿ ಕೆಲವು ತೊಂದರೆಗಳಾಗಿರುತ್ತದೆ. ಈ ಸಾಲಿನಲ್ಲಿಯೂ ಕೆ.ಇ.ಎ. ಯವರು ಡಿಪ್ಲೊಮಾ ಪ್ರವೇಶ ಪ್ರಕ್ರಿಯೆ ನಡೆಸಲು ಸಾಧ್ಯವಿಲ್ಲವೆಂದೂ, ತಾಂತ್ರಿಕ ಶಿಕ್ಷಣ ವತಿಯಿಂದಲೇ ಆನ್‌ಲೈನ್ ಪ್ರವೇಶ ಪ್ರಕ್ರಿಯೆಯನ್ನು ನಡೆಸಬೇಕೆಂದು ತಿಳಿಸಿರುತ್ತಾರೆ. ಆದ್ದರಿಂದ ಕಳೆದ ಸಾಲಿನಲ್ಲಿ ಆದ ತೊಂದರೆಗಳು ಈ ಸಾಲಿನಲ್ಲಿ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಲಾಗಿದ್ದು, ಪೂರ್ವಭಾವಿ ಸಿದ್ದತೆಗಳನ್ನು ಈಗಾಗಲೇ ಕೈಗೊಂಡಿರುವುದಾಗಿ ತಿಳಿಸಿದರು.

2. 2013-14ನೇ ಸಾಲಿನ ಆನ್‌ಲೈನ್ ಇಂಟರಾಕ್ಟಿವ್ ಕೌನ್ಸಿಲಿಂಗ್‌ನ ರೂಪುರೇಶಗಳ ಕುರಿತು ಚರ್ಚಿಸಲಾಗಿ, ಈ ಸಾಲಿನಲ್ಲಿ ಪ್ರವೇಶ ಪ್ರಕ್ರಿಯೆ ಕುರಿತು ಸರ್ಕಾರದ ಹಂತದಲ್ಲಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೆಇಎ ಅಧಿಕಾರಿಗಳು ಹಾಗೂ ಎನ್‌ಐಸಿ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಇಂಟರಾಕ್ಟಿವ್ ಕೌನ್ಸಿಲಿಂಗ್ ಮಾಡಬೇಕೆ ಅಥವಾ ಆಪ್ಷನಲ್ ಎಂಟ್ರಿ ಸುಡೋ ಸಿಸ್ಟಮ್ ಮೂಲಕ ಪ್ರವೇಶ ಪ್ರಕ್ರಿಯೆ ನಡೆಸಬೇಕೆ ಎಂಬುದರ ಕುರಿತು ಚರ್ಚೆಯಾಯಿತು ಎಂದು ತಿಳಿಸಿದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಎನ್‌ಐಸಿ ಯವರು ಸುಡೋ ಪದ್ದತಿ ಅಳವಡಿಸಲು ಸೂಚಿಸಲಾಗಿ, ಸುಡೋ ಪದ್ದತಿಯು ಐಐಟಿ, ಐಐಸಿ, ಎನ್‌ಐಟಿಕೆ ಇವುಗಳಲ್ಲಿ ಕಡಿಮೆ ಸಂಸ್ಥೆಗಳಿದ್ದು ಎಲ್ಲವೂ ಒಂದೇ ದರ್ಜೆಯ ಸಂಸ್ಥೆಗಳಾಗಿದ್ದು, ಸುಡೋ ಆಪ್ಷನಲ್ ಎಂಟ್ರಿ ಪದ್ದತಿ ಯಶಸ್ವಿಯಾಗಿದ್ದು, ಇಂಜಿನಿಯರಿಂಗ್ ಕಾಲೇಜುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ವಿವಿಧ ದರ್ಜೆಗಳಿಗೆ ಸೇರಿದವುಗಳಾಗಿದ್ದು, ಪ್ರವೇಶ ಪ್ರಕ್ರಿಯೆಯ ಸೀಟು ಆಯ್ಕೆಯಲ್ಲಿ ಗೊಂದಲ ಉಂಟಾಗಿ, ಈ

ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುತ್ತದೆ. ಮೇಲಿನ ಅಂಶಗಳ ಹಿನ್ನಲೆಯಲ್ಲಿ ಹಾಗೂ ಡಿಪ್ಲೊಮಾ ಪ್ರವೇಶಕ್ಕಾಗಿ ಹೆಚ್ಚಾಗಿ ಗ್ರಾಮಾಂತರ ಹಾಗೂ ಹಿಂದುಳಿದ ಪ್ರದೇಶಗಳಿಂದ ವಿದ್ಯಾರ್ಥಿಗಳಿಂದ ಬರುವುದರಿಂದ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಇಂಟರಾಕ್ಟಿವ್ ಕೌನ್ಸಿಲಿಂಗ್ ಮೂಲಕ ನಡೆಸುವುದು ಸೂಕ್ತವೆಂದು ಸರ್ಕಾರದ ಗಮನಕ್ಕೆ ತಂದಿರುವುದಾಗಿ ತಿಳಿಸಿದರು. ಇಂಟರಾಕ್ಟಿವ್ ಕೌನ್ಸಿಲಿಂಗ್‌ಗೆ ಸಾಫ್ಟ್‌ವೇರ್ ತಯಾರಿಸಿ ಕೊಡಲು ಎನ್‌ಐಸಿ ಯವರನ್ನು ಕೇಳಲಾಗಿ, ಸುಡೋ ಪದ್ದತಿಯ ಸಾಫ್ಟ್‌ವೇರ್ ನೀಡುವುದಾಗಿ, ಇಂಟರಾಕ್ಟಿವ್ ಕೌನ್ಸಿಲಿಂಗ್ ಮಾಡುವುದಾದರೆ ಎನ್‌ಐಸಿ ವತಿಯಿಂದ ಸಾಫ್ಟ್‌ವೇರ್ ತಯಾರಿಸಿಕೊಡಲು ಸಾಧ್ಯವಿಲ್ಲವೆಂದೂ ತಿಳಿಸಿರುವುದಾಗಿ ಸಭೆಯ ಗಮನಕ್ಕೆ ತಂದರು. ಸಾಫ್ಟ್‌ವೇರ್‌ನ್ನು ಸಿದ್ದಪಡಸಲಾಗುತ್ತಿದ್ದು, ಇಂಟರಾಕ್ಟಿವ್ ಕೌನ್ಸಿಲಿಂಗ್ ನಡೆಸಲು ಸರ್ಕಾರದ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ, ಅನುಮೋದನೆ ಬಂದ ನಂತರ ಪ್ರವೇಶ ಪ್ರಕ್ರಿಯೆ ಪ್ರಕಟಣೆ, ಪ್ರವೇಶ ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಾಗಿ ನಿರ್ದೇಶಕರು ತಿಳಿಸಿದರು. ಸರ್ಕಾರದಿಂದ ಪ್ರಸ್ತಾವನೆ ಅನುಮೋದನೆ ಕೂಡಲೇ ಪಡೆಯಲು ಶ್ರೀ ರಾಘವೇಂದ್ರ ಪ್ರಸಾದ್, ಸಹಾಯಕ ನಿರ್ದೇಶಕರು (ಎಂಪಿಸಿ) ರವರು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಕಛೇರಿಗೆ ಖುದ್ದಾಗಿ ಭೇಟಿ ನೀಡಿ ಅದರ ಅತ್ಯಾವಶ್ಯಕತೆಯನ್ನು ತಿಳಿಸಿ ಕೂಡಲೇ ಅನುಮೋದನೆ ಪಡೆಯಲು ಗಮನಹರಿಸಲು ಸೂಚಿಸಿದರು.

ಆನ್‌ಲೈನ್ ಇಂಟರಾಕ್ಟಿವ್ ಕೌನ್ಸಿಲಿಂಗ್ ನಡೆಸುವುದೇ ಅಥವಾ ಸುಡೋ ಪದ್ಧತಿಯಂತೆ ಪ್ರವೇಶ ಪಕ್ರಿಯೆ ನಡೆಸುವುದೇ ಎಂದು ಎಲ್ಲಾ ಪ್ರಾಂಶುಪಾಲರ ಅಭಿಪ್ರಾಯ ಸಂಗ್ರಹಿಸಲಾಗಿ, ಇಂಟರಾಕ್ಟಿವ್ ಆನ್‌ಲೈನ್ ಕೌನ್ಸಿಲಿಂಗ್ ಮೂಲಕವೇ ಪ್ರವೇಶ ಪ್ರಕ್ರಿಯೆ ನಡೆಸಲು ಬಹುತೇಕ ಪ್ರಾಂಶುಪಾಲರು ಅಭಿಪ್ರಾಯಪಟ್ಟರು.

3. ಅರ್ಜಿ ನಮೂನೆ, ವಿತರಣೆ, ಸಲ್ಲಿಕೆ ಮತ್ತು ತಾತ್ಕಾಲಿಕ ವೇಳಾಪಟ್ಟಿಯ ಬಗ್ಗೆ ಚರ್ಚಿಸಲಾಗಿ, ಮಾನ್ಯ ಉಚ್ಛನ್ಯಾಯಾಲಯವು ವೃತ್ತಿಪರ ಕೋರ್ಸುಗಳಿಗೆ ಸಂಬಂದಿಸಿದಂತೆ ಪ್ರವೇಶ ಪ್ರಕ್ರಿಯೆಯು ಜುಲೈ 31 ರೊಳಗೆ ನಡೆಸಬೇಕೆಂದು ನಿರ್ದೇಶನವಿರುವುದರಿಂದ ಈ ಸಾಲಿನ ಪ್ರವೇಶ ಪ್ರಕ್ರಿಯೆಯ ಪೂರ್ವಭಾವಿ ಸಿದ್ದತೆಯನ್ನು ಈಗಾಗಲೇ ನಡೆಸುತ್ತಿರುವುದಾಗಿ ನಿರ್ದೇಶಕರು ಸಭೆಯ ಗಮನಕ್ಕೆ ತಂದರು.

ಕಳೆದ ಬಾರಿಯ ಪ್ರವೇಶ ಪ್ರಕ್ರಿಯೆಯಲ್ಲಿ ಕೆ.ಇ.ಎ. ವತಿಯಿಂದ ಕರೆಯಲಾಗಿದ್ದ ಓ.ಎಂ.ಆರ್. ಮಾದರಿಯ ಅರ್ಜಿಗಳನ್ನು ಸ್ಕ್ಯಾನ್ ಮಾಡಿ ದತ್ತಾಂಶವನ್ನು ಪರಿವರ್ತಿಸಲು ಬಹಳಷ್ಟು ಸಮಯ ತೆಗೆದುಕೊಂಡಿದ್ದರಿಂದ, ಈ ಸಾಲಿನಲ್ಲಿ ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಎಸ್.ಎಸ್.ಎಲ್.ಸಿ. ಬೋರ್ಡ್‌ನಿಂದ ಈಗಾಗಲೇ ಪಾಸಾಗಿರುವ ವಿದ್ಯಾರ್ಥಿಗಳ ಮೂರು ವರ್ಷದ ಡೇಟಾ ಸಂಗ್ರಹಿಸಲಾಗಿದ್ದು, ವಿದ್ಯಾರ್ಥಿಗಳ ರಿಜಿಸ್ಟರ್ ನಂಬರ್ ನಮೂದಿಸಿದಲ್ಲಿ, ವಿದ್ಯಾರ್ಥಿಗಳ ಎಲ್ಲಾ ವಿವರಗಳು ಲಭಿಸುವ ಹಾಗೆ ಆನ್‌ಲೈನ್ ಮುಖಾಂತರ ಅರ್ಜಿ ತುಂಬಲು ತಂತ್ರಾಂಶವನ್ನು ಸಿದ್ದಪಡಿಸಲಾಗುತ್ತಿದೆ. ಕಳೆದ ಬಾರಿ ಅರ್ಜಿ ಪರಿಶೀಲನಾ ಕೇಂದ್ರಗಳೆಂದು ಗುರುತಿಸಿದ್ದ 45 ಕೇಂದ್ರಗಳನ್ನು "ಆನ್‌ಲೈನ್ ಅರ್ಜಿ ಸಲ್ಲಿಕೆ/ ದಾಖಲೆ ಪರಿಶೀಲನೆ ಕೇಂದ್ರ" ಎಂದು ತಿದ್ದುಪಡಿ ಮಾಡಲಾಗಿದ್ದು, ವಿದ್ಯಾರ್ಥಿಗಳು ಅರ್ಜಿಗಳನ್ನು 45 ಆಯ್ದ "ಆನ್ ಲೈನ್ ಅರ್ಜಿ ಸಲ್ಲಿಕೆ/ ದಾಖಲೆ ಪರಿಶೀಲನೆ ಕೇಂದ್ರ" ಗಳಲ್ಲಿ

ಪಡೆದು, ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳೊಂದಿಗೆ ಮೂಲದಾಖಲೆಗಳನ್ನು ನಿಗದಿತ ಸಮಯದೊಳಗೆ ಸಲ್ಲಿಸಬೇಕಾಗಿರುತ್ತದೆ. ವಿದ್ಯಾರ್ಥಿಗಳ ಸಮ್ಮುಖದಲ್ಲಿ ಸಿಬ್ಬಂದಿಯವರು ದಾಖಲೆಗಳನ್ನು ಪರಿಶೀಲಿಸಿ ಆನ್‌ಲೈನ್ ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ರಿಜಿಸ್ಟರ್ ನಂಬರ್ ನಮೂದಿಸಿದಲ್ಲಿ, ವಿದ್ಯಾರ್ಥಿಗಳ ದಾಖಲೆ ಬರುವುದರಿಂದ ಉಳಿದ ಮಾಹಿತಿಯನ್ನು ಡಾಟಾ ಎಂಟ್ರಿ ಮಾಡಿ ಅಪ್‌ಲೋಡ್ ಮಾಡಿದ ನಂತರ, ಸ್ವೀಕೃತಿಯನ್ನು ಪ್ರಿಂಟ್ ತೆಗೆದು ವಿದ್ಯಾರ್ಥಿಯ ಫೋಟೋ ಧೃಡೀಕರಿಸಿ ವಿದ್ಯಾರ್ಥಿಗಳಿಗೆ ಸ್ವೀಕೃತಿಯನ್ನು ನೀಡಬೇಕಾಗುತ್ತದೆ ಎಂದು ನಿರ್ದೇಶಕರು ತಿಳಿಸಿದರು.

ಅರ್ಜಿ ಸಲ್ಲಿಕೆ/ದಾಖಲೆ ಪರಿಶೀಲನೆ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿದಾಗ, ಸಿಬಿಎಸ್‌ಸಿ ಹಾಗೂ ಇತರೆ ವಿದ್ಯಾರ್ಥಿಗಳ ಡೇಟಾ ಆನ್‌ಲೈನ್‌ನಲ್ಲಿ ಲಭ್ಯವಿಲ್ಲದಿದ್ದಲ್ಲಿ, ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಕೇಂದ್ರಗಳಲ್ಲಿ ಈ ಅರ್ಜಿಗಳನ್ನು ಪರಿಶೀಲಿಸಿ, ಡೇಟಾ ಎಂಟ್ರಿ ಮಾಡಿ ವಿದ್ಯಾರ್ಥಿಗಳಿಗೆ ಸ್ವೀಕೃತಿಯನ್ನು ನೀಡಬೇಕೆಂದು ಸೂಚಿಸಿದರು. ಎಲ್ಲಾ ಅರ್ಜಿಗಳ ಡಾಟಾವನ್ನು ನಿರ್ದೇಶನಾಲಯಕ್ಕೆ ಅಂತರ್ಜಾಲದ ಮೂಲಕ ಸಲ್ಲಿಸಬೇಕೆಂದು ನಿರ್ದೇಶಕರು ತಿಳಿಸಿದರು.

ಪ್ರವೇಶ ಪ್ರಕ್ರಿಯೆಯನ್ನು ನಡೆಸಲು ತಾತ್ಕಾಲಿಕ ವೇಳಾಪಟ್ಟಿಯನ್ನು ತಯಾರಿಸಲಾಗಿದ್ದು, ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 15–5–2013, ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 25–5–2013, ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟಣೆ ದಿ: 29–5–2013, ಮೆರಿಟ್ ಪಟ್ಟಿ ತಿದ್ದುಪಡಿ ದಿ: 31–5–2013, ಅಂತಿಮ ಮೆರಿಟ್ ಲಿಸ್ಟ್ ಪ್ರಕಟಣೆ ದಿ: 01–06–2013, ವಿವಿಧ ಹಂತಗಳ ಪ್ರವೇಶ ಪ್ರಕ್ರಿಯೆಯು ದಿನಾಂಕ: 03–6–2013 ರಿಂದ 16–07–2013ರವರೆಗ ನಡೆಯುವುದಾಗಿ ಸಭೆಗೆ ತಿಳಿಸಿದರು.

ಅರ್ಜಿಗಳನ್ನು ಸ್ವೀಕರಿಸುವ ಕೊನೆ ದಿನಾಂಕದಂದು ಹೆಚ್ಚು ಅರ್ಜಿಗಳು ಸ್ವೀಕೃತವಾಗುವುದರಿಂದ ಅದೇ ದಿನ ಎಲ್ಲಾ ಅರ್ಜಿಗಳ ಡೇಟಾ ಎಂಟ್ರಿ ಮಾಡಲು ಕಷ್ಟವಾಗುತ್ತದೆಂದೂ, ಎರಡು ದಿನ ಹೆಚ್ಚು ಸಮಯಾವಕಾಶ ನೀಡಬೇಕೆಂದು ಹಾಗೂ ಕಂಪ್ಯೂಟರ್ ಕೆಲಸಕ್ಕೆ ನಿಯೋಜಿಸುವ ಉಪನ್ಯಾಸಕರನ್ನು ಪರೀಕ್ಷಾ ಕೆಲಸದಿಂದ ವಿನಾಯಿತಿ ನೀಡಬೇಕೆಂದು ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ ಪ್ರಾಂಶುಪಾಲರಾದ ಶ್ರೀ ಎ.ವಿ.ಕಾತರಕಿ ರವರು ನಿರ್ದೇಶಕರಲ್ಲಿ ಮನವಿ ಮಾಡಿದರು. ಈ ಕುರಿತಂತೆ ನಿರ್ದೇಶಕರು ಮಾತನಾಡಿ, ಕಂಪ್ಯೂಟರ್ ಕೆಲಸ ಕಾರ್ಯಗಳಿಗೆ ಒಂದಕ್ಕಿಂತ ಹೆಚ್ಚು ಉಪನ್ಯಾಸಕರನ್ನು ಬಳಸಿಕೊಳ್ಳದೆ, ಕಂಪ್ಯೂಟರ್ ಜ್ಞಾನವಿರುವ ಬೆರಳಚ್ಚುಗಾರರು, ಕಛೇರಿ ಸಿಬ್ಬಂದಿ, ಕಾರ್ಯಗಾರ ಸಿಬ್ಬಂದಿಯವರನ್ನು ಉಪಯೋಗಿಸಕೊಳ್ಳಬೇಕೆಂದು ಹಾಗೂ ಹೆಚ್ಚು ಅರ್ಜಿಗಳ ಡೇಟಾ ಎಂಟ್ರಿ ಮಾಡಲು ಹೆಚ್ಚು ಕಂಪ್ಯೂಟರ್‌ಗಳನ್ನು ಬಳಸಿಕೊಂಡು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು.

4. ಅರ್ಜಿ ಸಲ್ಲಿಕೆ / ದಾಖಲೆ ಪರಿಶೀಲನಾ ಕೇಂದ್ರದಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಡೇಟಾ ಎಂಟ್ರಿ ಮಾಡಿದ ನಂತರ ಅರ್ಜಿಗಳನ್ನು ನಿರ್ದೇಶನಾಲಯಕ್ಕೆ ಕಳುಹಿಸಬೇಕೆ? ಅಥವಾ ಅದೇ ಕೇಂದ್ರಗಳಲ್ಲಿಯೇ ಉಳಿಸಿಕೊಳ್ಳಬೇಕೆ? ಎಂದು ಪ್ರಾಚಾರ್ಯರು ಕೇಳಲಾಗಿ, ಆಯಾಯಾ ಕೇಂದ್ರಗಳಲ್ಲಿಯೇ ಅರ್ಜಿಗಳನ್ನು ಸಂಗ್ರಹಿಸಿ ಹಾಗೂ ಯಾವುದಾದರೂ ಅರ್ಜಿಗಳನ್ನು ಪರಿಶೀಲನೆಗಾಗಿ ಕೇಳಿದಾಗ ಅಷ್ಟೇ ನಿರ್ದೇಶನಾಲಯಕ್ಕೆ ನೀಡಬೇಕು ಎಂದು ನಿರ್ದೇಶಕರು ಸೂಚಿಸಿದರು.

5. ಎಸ್.ಜೆ. ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರಾದ ಶ್ರೀ ಕೆ. ಕೃಷ್ಣಮೂರ್ತಿಯವರು ಮಾತನಾಡಿ, ಕಳೆದ ಬಾರಿ ಸ್ಪೆಷಲ್ ಕ್ಯಾಟಗರಿ ಸೀಟುಗಳ ಸೀಟ್‌ಮ್ಯಾಟ್ರಿಕ್ಸ್‌ನ್ನು ಪ್ರಕಟಿಸದೇ ಬಹಳಷ್ಟು ತೊಂದರೆಯಾಗಿದ್ದು, ಎನ್‌ಸಿಸಿ ಕೋಟಾದಲ್ಲಿನ ಅಭ್ಯರ್ಥಿಗಳ ಮೆರಿಟ್ ತಯಾರಿಸಿ, 1:5 ಅಥವಾ 1:10 ರಂತೆ ವಿದ್ಯಾರ್ಥಿಗಳನ್ನು ಆಹ್ವಾನಿಸದಲ್ಲಿ ಪ್ರಕ್ರಿಯೆ ಸುಲಭವಾಗುತ್ತದೆ ಎಂದು ತಿಳಿಸಿದರು. ಈ ಬಾರಿ ಸ್ಪೆಷಲ್ ಕ್ಯಾಟಗರಿ ಸೀಟ್‌ಗಳ ಲಭ್ಯತೆ ಕುರಿತು ಸೀಟ್ ಮ್ಯಾಟ್ರಿಕ್ಸ್‌ನ್ನು ಬ್ರೋಷರ್‌ನಲ್ಲಿ ನಮೂದಿಸಲಾಗಿದ್ದು, ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸುವುದಾಗಿ ನಿರ್ದೇಶಕರು ತಿಳಿಸಿದರು. ಎನ್‌ಸಿಸಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಕುರಿತು ಚರ್ಚಿಸಲಾಗಿ, ಎನ್.ಸಿ.ಸಿ. ಕೋಟಾದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಹಾಗೂ ಮೆರಿಟ್ ನೀಡಿಕೆ ಪ್ರಕ್ರಿಯೆ ಕೆಲಸ ಕಾರ್ಯ ನಿರ್ವಹಿಸಲು ಎಸ್.ಜೆ. ಸಂಜೆ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರಾದ ಶ್ರೀ ಹೆಚ್.ಬಿ. ವೇಣುಗೋಪಾಲ್‌ರವರನ್ನು ನಿಯೋಜಿಸಲು ಸೂಚಿಸಿದರು.

6. ಈ ಸಾಲಿನ ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಿಲಿಂಗ್ ಕೇಂದ್ರಗಳಿಗೆ ಬೇಕಾಗುವ ಹಾರ್ಡ್‌ವೇರ್ ಮತ್ತು ಇತರೆ ಪರಿಕರಗಳ ಕುರಿತು ಚರ್ಚಿಸಲಾಗಿ, ಈ ಸಾಲಿನ ಪ್ರವೇಶ ಪ್ರಕ್ರಿಯೆಗೆ ನಿರ್ದೇಶನಾಲಯ ಸೇರಿದಂತೆ 12 ನೋಡಲ್ ಸೆಂಟರ್‌ಗಳಿಗೆ ಬೇಕಾಗುವ ಸಿಸ್ಟಮ್ಸ್, ಸರ್ವರ್‌ಗಳು, ಪ್ರಿಂಟರ್‌ಗಳನ್ನೊಳಗೊಂಡಂತೆ ಇನ್ನಿತರೆ ಪರಿಕರಗಳನ್ನು ಕೆ.ಇ.ಎ. ವತಿಯಿಂದ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಪ್ರಸ್ತಾವನೆ ತ್ವರಿತವಾಗಿ ಅನುಮೋದನೆಯಾಗಲು ಗಮನಹರಿಸಲು ಶ್ರೀ ರಾಘವೇಂದ್ರ ಪ್ರಸಾದ್‌ರವರಿಗೆ ನಿರ್ದೇಶಕರು ಸೂಚಿಸಿದರು.

7. ಸರ್ಕಾರದಿಂದ ಪ್ರವೇಶ ಪ್ರಕ್ರಿಯೆಗೆ ಅನುಮೋದನೆ ನೀಡಿದ ತಕ್ಷಣ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಎಲ್ಲಾ ಪ್ರಾಚಾರ್ಯರು ಕೆಳಕಂಡ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸುವ ಸೂಚನೆಗಳನ್ನು ಗಮನಿಸುತ್ತಿರಬೇಕೆಂದು ಹಾಗೂ ಎಲ್ಲಾ ಪ್ರಾಚಾರ್ಯರು ತಮ್ಮ ತಮ್ಮ ಇ-ಮೇಲ್‌ಗಳನ್ನು ಪ್ರತಿನಿತ್ಯ ಪರಿಶೀಲಿಸುತ್ತಿರಬೇಕೆಂದು ನಿರ್ದೇಶಕರು ತಿಳಿಸಿದರು.
www.dtekarnataka.in, www.diplomaadmission.in ,
www.dte.kar.nic.in

8. ಇತರೆ ವಿಷಯಗಳ ಕುರಿತು ಚರ್ಚಿಸಲಾಗಿ, ಶ್ರೀ ಅರವಿಂದ ಕುಲಕರ್ಣಿಯವರು ಇನ್ನೋವೇಷನ್ ಕ್ಲಬ್ ಕುರಿತು ಸಭೆಗೆ ಮಾಹಿತಿ ನೀಡಿದರು. ಡಿಪ್ಲೊಮಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಹಲವಾರು ಪ್ರಾಜೆಕ್ಟ್‌ಗಳನ್ನು ಪ್ರತಿ ವರ್ಷ ತಯಾರಿಸುತ್ತಾರೆ. ಆದರೆ ಅವುಗಳಿಗೆ ಮನ್ನಣೆ ಸಿಗುವುದು ವಿರಳ. ಹೀಗಾಗಿ ಇನ್ನೋವೇಷನ್ ಕ್ಲಬ್‌ನಲ್ಲಿ ಸದಸ್ಯರಾಗುವ ಮೂಲಕ ಪ್ರಾಜೆಕ್ಟ್‌ಗಳನ್ನು ರಾಜ್ಯ, ರಾಷ್ಟ್ರ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರದರ್ಶಿಸಲು ಸಾಧ್ಯವಾಗುತ್ತದೆ. ಈಗಾಗಲೇ ಗುಜರಾತ್ ರಾಜ್ಯವು ಇದನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುತ್ತಿದ್ದು, ನಮ್ಮ ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ನವರು ಸದಸ್ಯರಾಗುವ ಮೂಲಕ ತಂತ್ರಜ್ಞಾನದ ಜ್ಞಾನಾಭಿವೃದ್ಧಿಯಾಗುವುದರೊಂದಿಗೆ, ಸಂಸ್ಥೆಗಳು ಕೈಗಾರಿಕೋದ್ಯಮಗಳೊಂದಿಗೆ ನಿಕಟ ಸಂಪರ್ಕ ಹೊಂದುವುದರಿಂದ, ಕೈಗಾರಿಕೆಗಳಲ್ಲಿನ ಏನೇ ತಾಂತ್ರಿಕ ದೋಷಗಳು ಕಂಡುಬಂದಲ್ಲಿ ಆನ್‌ಲೈನ್ ಮೂಲಕ ಪರಿಹರಿಸಲು ಸಹಕರಿಸಬಹುದಾಗಿರುತ್ತದೆ ಎಂದು ತಿಳಿಸಿದರು. ಈ ಕ್ರಮದಿಂದ ಯಾವುದೇ ಪ್ರಾಜೆಕ್ಟ್ ಪುನಾರಾವರ್ತನೆಯಾಗಲು ಅವಕಾಶವಿರುವುದಿಲ್ಲವೆಂದು ಎಂದು ಸಭೆಗೆ ತಿಳಿಸಿದರು. ಚಿಕ್ಕೋಡಿ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಪೂಜಾರವರು ವಿವಿಧ ಪ್ರಾಜೆಕ್ಟ್‌ಗಳನ್ನು ಸಭೆಯಲ್ಲಿ

ಡೆಮೋ ನೀಡಿದರು ಹಾಗೂ ನ್ಯಾನೋ ಟೆಕ್ನಾಲಜಿಯಿಂದಾಗುವ ಉಪಯೋಗಗಳನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಡಿ.ವಿ. ಶ್ರೀನಿವಾಸಮೂರ್ತಿ ಯವರು ಸಭೆಯಲ್ಲಿನ ಎಲ್ಲಾ ಪ್ರಾಚಾರ್ಯರಿಗೆ, ಅಧಿಕಾರಿಗಳಿಗೆ, ಚಿಕ್ಕೋಡಿ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಪೂಜಾರರವರಿಗೆ ಹಾಗೂ ಸಾಫ್ಟ್‌ವೇರ್ ಅಭಿವೃದ್ದಿಪಡಿಸಿರುವ ಶ್ರೀ ರವಿ ಯವರಿಗೆ ವಂದನಾರ್ಪಣೆಯನ್ನು ಅರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ನಿರ್ದೇಶಕರು

ಪ್ರತಿ:

1. ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ
2. ಇ-ಆಡಳಿತ ವಿಭಾಗಕ್ಕೆ – ಸೂಕ್ತ ಕ್ರಮಕ್ಕಾಗಿ

2013–14ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಆನ್‌ಲೈನ್ ಪ್ರವೇಶಾತಿಗೆ ಸಂಬಂಧಿಸಿದಂತೆ, ಆಯ್ದ 45 ಆನ್‌ಲೈನ್ ಅರ್ಜಿ ಸಲ್ಲಿಕೆ/ ದಾಖಲೆ ಪರಿಶೀಲನೆ ಕೇಂದ್ರ"ಗಳ ಕುರಿತು ಚರ್ಚಿಸಲು ದಿನಾಂಕ: 06–5–2013ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಪ್ರಾಂಶುಪಾಲರ ಸಭೆಯನ್ನು ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆಯ ಸಭಾಂಗಣದಲ್ಲಿ ಕರೆಯಲಾಗಿ, ಸಭೆಗೆ ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿ ವರ್ಗ

| ಕ್ರ.ಸಂ. | ಹೆಸರು / ಪದನಾಮ/ ಸಂಸ್ಥೆ<br>ಶ್ರೀ/ಶ್ರೀಮತಿ |
|---|---|
| 1 | ಹೆಚ್.ಯು. ತಳವಾರ್,<br>ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು |
| 2 | ಬೋಜೇದಾರ್,<br>ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು |
| 3 | ಆರ್. ಮಂಜುನಾಥ್,<br>ಜಂಟಿ ನಿರ್ದೇಶಕರು (ತನಿಖೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು |
| 4 | ರಾಘವೇಂದ್ರ ಪ್ರಸಾದ್,<br>ಸಹಾಯಕ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು |
| 5 | ಡಿ.ವಿ. ಶ್ರೀನಿವಾಸಮೂರ್ತಿ,<br>ವಿಷಯ ಪರಿವೀಕ್ಷಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು |
| 6 | ಧರಣೇಂದ್ರ.ಜಿ.ಸಿ.,<br>ವಿಷಯ ಪರಿವೀಕ್ಷಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು |
| 7 | ರವಿ ತಳವಾರ್<br>ಸಹಾಯಕ ಪ್ರಾಧ್ಯಾಪಕರು, ಬಿಎಂಎಸ್ ಕಾಲೇಜು, ಬೆಂಗಳೂರು |
| 8 | ಕಮಲಾಕ್ಷಿ. ಎಂ,<br>ಪ್ರಾಂಶುಪಾಲರು, ಜಿಆರ್ಐಸಿಪಿ, ಬೆಂಗಳೂರು |
| 9 | ಮನೋಹರ್ ಜಿ ನಾಯಕ್,<br>ಪ್ರಾಂಶುಪಾಲರು, ಜಿಆರ್‌ಸಿಐಬಿಎಂ, ಬೆಂಗಳೂರು |
| 10 | ವೈ ಎನ್ ದೊಡ್ಡಮನಿ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ |
| 11 | ಜಿ.ಎಂ ಗೋಣಿ<br>ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ |
| 12 | ಆರ್.ಬಿ ಪವಾರ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬಿಜಾಪುರ |
| 13 | ಜಗಾದೆ<br>ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ |
| 14 | ಎಸ್.ಬಿ ಪಾಟೀಲ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಗುಲ್ಬರ್ಗಾ |
| 15 | ಮಲ್ಲಿಕಾರ್ಜುನಪ್ಪ ಶ್ಯಾವಿ |

| | |
|---|---|
| | ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಅಫ್‌ಜಲ್‌ಪುರ |
| 16 | ಹೆಚ್ ಎಲ್ ಕಾಂತರಾಜಪ್ಪ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ |
| 17 | ಹೆಚ್.ಬಿ ವೇಣುಗೋಪಾಲ<br>ಪ್ರಾಂಶುಪಾಲರು, ಸರ್ಕಾರಿ ಎಸ್.ಜೆ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು |
| 18 | ಸಿ.ಪಿ ಗಣಪತಿ<br>ಪ್ರಾಂಶುಪಾಲರು, ಸರ್ಕಾರಿ ಡಿ.ಎ.ಸಿ.ಜಿ ಪಾಲಿಟೆಕ್ನಿಕ್, ಬೆಂಗಳೂರು |
| 19 | ಕಾಂತುದೇವಾಡಿಗ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ |
| 20 | ವಿಜಯಕುಮಾರ್ ಬಿ<br>ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು |
| 21 | ಜಯಶಂಕರ ಕೆ.ಎಸ್<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು |
| 22 | ಟಿ ಹರೀಶ್<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ |
| 23 | ಹೆಚ್ ಜಯಪ್ಪ<br>ಪ್ರಾಂಶುಪಾಲರು, ಸರ್ಕಾರಿ ಡಿ.ಆರ್.ಆರ್ ಪಾಲಿಟೆಕ್ನಿಕ್, ದಾವಣಗೆರೆ |
| 24 | ಸುರೇಶ್ ಗಣೇಶ್<br>ಪ್ರಾಂಶುಪಾಲರು, ಸರ್ಕಾರಿ ಸ್ಕೂಲ್ ಆಫ್ ಮೈನ್ಸ್ |
| 25 | ಎಸ್.ಟಿ ಭೈರಪ್ಪನವರ್<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಘಡ |
| 26 | ವಿ.ಬಿ ಕಂಚಿ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ |
| 27 | ಕೆ.ಆರ್ ಚಂದ್ರಶೇಖರ್‌ಗೌಡ<br>ಪ್ರಾಂಶುಪಾಲರು, ಸರ್ಕಾರಿ ವಿ.ಐ.ಎಸ್.ಎಸ್.ಜೆ ಪಾಲಿಟೆಕ್ನಿಕ್, ಭದ್ರಾವತಿ |
| 28 | ಎ.ಆರ್ ಶಿವಕುಮಾರ್<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪಳ |
| 29 | ಲಿಂಗನಮೂರ್ತಿ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ |
| 30 | ಬಿ. ಜಯತೀರ್ಥ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ |
| 31 | ವಿಜಯಕುಮಾರ್ ಆರ್<br>ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ |
| 32 | ಕೆ.ಎಸ್ ವೆಂಕಟೇಶ್<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು |
| 33 | ಹೆಚ್.ವಿ ಶಿವಪ್ಪ |

| | |
|---|---|
| | ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ |
| 34 | ಎಂ.ಎಸ್ ನಟರಾಜ<br>ಪ್ರಾಂಶುಪಾಲರು, ಶ್ರೀಮತಿ ಎಲ್.ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ |
| 35 | ಡಿ.ಎಸ್ ರವಿಶಂಕರ್<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಸೊರಬ |
| 36 | ಮೊಹಮ್ಮದ್ ಅನ್ಸರ್<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು |
| 37 | ಕಾತರಕಿ<br>ಪ್ರಾಂಶುಪಾಲರು, ಸರ್ಕಾರಿ ವಸತಿ ಮಹಿಳಾ ಪಾಲಿಟೆಕ್ನಿಕ್, ಶಿವಮೊಗ್ಗ |
| 38 | ಎಂ ಅಭಿಲಾಷ್<br>ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು |
| 39 | ಕೆ. ಕೃಷ್ಣಮೂರ್ತಿ<br>ಪ್ರಾಂಶುಪಾಲರು, ಸರ್ಕಾರಿ ಎಸ್.ಜೆ ಪಾಲಿಟೆಕ್ನಿಕ್, ಬೆಂಗಳೂರು |
| 40 | ವಿವೇಕನಂದ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್ ಪೇಟೆ |
| 41 | ಶ್ರೀಮತಿ ರೇಣುಕಾನಾಯ್ಡು<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಫಿಲಂ ಅಂಡ್ ಟಿವಿ ಸಂಸ್ಥೆ, ಬೆಂಗಳೂರು |
| 42 | ಬಿ.ಎ ಪುಜಾರಿ<br>ಪ್ರಾಂಶುಪಾಲರು, ಸಿ.ಬಿ ಕೋರೆ ಪಾಲಿಟೆಕ್ನಿಕ್, ಚಿಕ್ಕೋಡಿ |
| 43 | ಎಸ್.ಶ್ರೀನಿವಾಸ ಕುಮಾರ್<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ |
| 44 | ಜಿ.ಬಿ ದಾನಶೆಟ್ಟಿ<br>ಪ್ರಾಂಶುಪಾಲರು, ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ |
| 45 | ಹೆಚ್.ಬಿ ಬಸವರಾಜು<br>ಪ್ರಾಂಶುಪಾಲರು, ಜೆ.ಎಸ್.ಎಸ್ ಪಾಲಿಟೆಕ್ನಿಕ್, ಮೈಸೂರು |
| 46 | ಎನ್.ಎಂ ಕೃಷ್ಣಮೂರ್ತಿ<br>ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ |
| 47 | ಬಿ ಕೊದಂಡರಾಮ<br>ಪ್ರಾಂಶುಪಾಲರು, ಸರ್ಕಾರಿ ಸಿ.ಪಿ.ಸಿ ಪಾಲಿಟೆಕ್ನಿಕ್, ಮೈಸೂರು |
| 48 | ವೀಣಾ ಕೆ<br>ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಗುಲ್ಬರ್ಗಾ |